<u>ಎಫ್ ಡಿ ಪಿ ಸಂಖ್ಯೆ:**-01/2016**</u> ಆರ್.ಡಬ್ಲ್ಯೂ:- **1**

ದಿನಾಂಕಃ **29.03.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಅರ್ಜಿದಾರರ ಪರ ವಕೀಲರಿಂದ:-</u>

ನಿಪಿ-1 ಮರಣ ಶಾಸನಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ ಮಾದಪ್ಪ ಮತ್ತು ಚಂದ್ರಮ್ಮ ನಮ್ಮ ಸಂಬಂಧಿಕರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಪಿ-1 ಮರಣ ಶಾಸನಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದವರು ನಮ್ಮ ಸಂಬಂಧಿಕರಲ್ಲ ಎಂದು ನಮೂದಾಗಿದೆ ಎಂದರೆ ಸರಿ. ಅರ್ಜಿಯ ಆಸ್ತಿಗೆ ಸಂಬಂಧಿಸಿದಂತೆ 1 ನೇ 8 ಭಾಗ ಆದೇಶವಾಗಿದೆ ಎಂದರೆ ಸರಿ. ಈಶ್ವರಪ್ಪ 1 ನೇ 8 ಭಾಗ ಭಾಗಾಂಶವನ್ನು ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 181/2013 ರಲ್ಲಿ ಆದಂತಹ ಆದೇಶದ ಬಗ್ಗೆ ನಾನು ವಕೀಲರ ಮೂಲಕ ತಿಳಿದುಕೊಂಡಿರುವುದಿಲ್ಲ. ಅಸಲು ದಾವಾ ಸಂಖ್ಯೆ 181/2013 ರಲ್ಲಿ 1 ನೇ 8 ಭಾಗಾಂಶದ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 181/2013 ರಲ್ಲಿ ನನ್ನ ಅತ್ತೆಗೆ ಬಂದಂತಹ ಭಾಗಾಂಶದ ಹಕ್ಕನ್ನು ಅರ್ಜಿದಾರರಿಗೆ ನಿಪಿ-1 ಮರಣ ಶಾಸನದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 1 ನೇ ಪ್ರತಿವಾದಿಗೆ ತನ್ನ ಭಾಗಾಂಶಕ್ಕೆ ಬಂದಂತಹ 1 ನೇ 8 ಭಾಗಾಂಶವಾದ 14.08 ಗುಂಟೆ ಜಮೀನಿನ ಬಗ್ಗೆ ಮುಂದೆ ಯಾವುದೇ ವಾದ ವಿವಾದಗಳು, ತಂಟೆ ತಕರಾರುಗಳು ಬರಬಾರದು ಎಂಬ ಸದುದ್ದೇಶದಿಂದ ತನ್ನ 2 ನೇ ಮಗನಾದ ಅರ್ಜಿದಾರರಿಗೆ ಬರೆದುಕೊಟ್ಟಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅತ್ತೆ ಪರಸ್ಪರ ಅನ್ಯೋನ್ಯವಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಅತ್ತೆಯ ನಡುವೆ ಯಾವುದೇ ಅನ್ಯೋನ್ಯ ಸಂಬಂಧ ಇಲ್ಲದಿದ್ದರೂ ಸಹ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ಅರ್ಜಿದಾರರ

ಜೊತೆಯಲ್ಲಿ ವಾಸವಾಗಿದ್ದರೇ ವಿನಃ ನಿಮ್ಮ ಜೊತೆಯಲ್ಲಿ ಯಾವತ್ತೂ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅತ್ತೆಗೆ ಅಸಲು ದಾವಾ ಸಂಖ್ಯೆ 181/2013 ರಲ್ಲಿ ಬಂದಂತಹ ಭಾಗಾಂಶದ ಹಕ್ಕನ್ನು ತನ್ನ ಸ್ವ ಇಚ್ಚೆಯಿಂದ ನಿಪಿ-1 ಮರಣ ಶಾಸನವನ್ನು ಅರ್ಜಿದಾರರ ಹೆಸರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಮರಣ ಶಾಸನದ ಬಗ್ಗೆ ನನಗೆ ಸಂಪೂರ್ಣ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 181/2013 ರಲ್ಲಿ ಆದಂತೆ ಡಿಕ್ರಿಯನ್ನು ಮಾಡಲು ನನಗೆ ಯಾವುದೇ ತಕರಾರು ಇರುವುದಿಲ್ಲ. ನಮ್ಮ ಅತ್ತೆಯ ಭಾಗಾಂಶಕ್ಕೆ ಬಂದಂತಹ ಆಸ್ತಿಯಿನ್ನು ನಿಪಿ-1 ಮರಣ ಶಾಸನದ ಆಧಾರದ ಮೇಲೆ ಅರ್ಜಿದಾರರಿಗೆ ಬರೆದುಕೊಟ್ಟಿದ್ದರಿಂದ ನನಗೆ ನನ್ನ ಅತ್ತೆಯ ಭಾಗಾಂಶದ ಆಸ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಮರಣ ಶಾಸನದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಮ್ಮ ಅತ್ತೆಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.